ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ॰ರವರ ನ್ಯಾಯಾಲಯದಲ್ಲಿ, ನ.ರಾ.ಪುರ.

<u>ಸಿ.ಸಿ. ನಂ ॰**22/2025**</u>

| | | |
|---|---|---|
| ಸಾಕ್ಷಿದಾರರ ಹೆಸರು | ॰ ಗುರುದತ್ತ ಕಾಮತ್ | ಸಿ.ಡಬ್ಲ್ಯೂ - 16 |
| ತಂದೆಯ ಹೆಸರು | ॰ ಅನಂತ್ | ಪಿ.ಡಬ್ಲ್ಯೂ -07 |
| ವಯಸ್ಸು | ॰ 45 ವರ್ಷ | |
| ಉದ್ಯೋಗ | ॰ ಪಿ ಸಿ ಐ, ಎನ್ ಆರ್ ಪುರ | |
| ವಾಸಸ್ಥಳ | ॰ ಎನ್ ಆರ್ ಪುರ. | |

ದಿನಾಂಕ॰ **28.04.2026** ರಂದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ॰ ಮಾನ್ಯ ಎಪಿಪಿ ಯವರಿಂದ ॰॰</u>

1. ನಾನು ದಿ॰ 01/03/2024 ರಿಂದ ಇಲ್ಲಿಯವರೆಗೆ ಎನ್ ಆರ್ ಪುರ ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

2. ದಿ॰ 19.12.2024 ರಂದು ಈ ಪ್ರಕರಣದ ಕಡತವನ್ನು ಚಾಸಾ 14 ರವರಿಂದ ಪಡೆದುಕೊಂಡು ಅವರು ಅಲ್ಲಿಯವರೆಗೆ ಮಾಡಿದ ತನಿಖೆಯನ್ನು ಪರಿಶೀಲಿಸಿ ಅದೇ ದಿನ ರಾತ್ರಿ 8.30 ರಿಂದ 10.30 ರವರೆಗೆ ಸರ್ಕಾರಿ ಆಸ್ಪತ್ರೆ ಎನ್ ಆರ್ ಪುರದ ಶವಗಾರದಲ್ಲಿ ಮೃತ ಸಜೇಶ್ ಇವರ ಶವ ತನಿಖಾ ವರದಿಯನ್ನು ಚಾಸಾ 7 ರಿಂದ ಚಾಸಾ 4 ರವರ ಸಮಕ್ಷಮ ಜರುಗಿಸಿ ಆ ಕಾಲಕ್ಕೆ ಭಾವಚಿತ್ರ ತೆಗೆಸಿರುತ್ತೇನೆ ಮತ್ತು ಚಾಸಾ 5 ಮತ್ತು ಚಾಸಾ 6 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ನಂತರ ಮರಣೋತ್ತರ ಮುಗಿದ ನಂತರ ಅವರ ಸಂಬಂಧಿಕರಿಗೆ ಶವವನ್ನು ನೀಡಿ ಅವರಿಂದ ರಶೀಧಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೆನೆ.

2. ದಿ॰ 20.12.2024 ರಂದು ವಾಹನ ಸಂಖ್ಯೆ ಕೆ.ಎ. 18 -ಇ.ಜಿ 1018 ಮಾಲೀಕರಿಗೆ ಕಲಂ 133 ಮೋಟಾರ್ ವಾಹನ ಕಾಯ್ದೆ ಯಡಿ ನೋಟಿಸ್ ಜಾರಿಗೊಳಿಸಿರುತ್ತೇನೆ. ಮತ್ತು ಅದೇ ದಿನ ಕಾರ್ ಸಂಖ್ಯೆ ಕೆ.ಎ-01 ಎಂ.ಎಫ್.6352 ಇದರ ಮಾಲೀಕರಾದ 1 ನೇ ಆರೋಪಿ ಕಲಂ 133 ಮೋಟಾರ್ ವಾಹನ ಕಾಯ್ದೆಯಡಿ ನೋಟಿಸ್ ಜಾರಿಗೊಳಿಸಿರುತ್ತೇನೆ. ಅದೇ ದಿನ ಚಾಸಾ 11 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿ॰ 22.12.2024 ರಂದು ಸ್ಥಳಕ್ಕೆ ಭೇಟಿ ನೀಡಿ ಚಾಸಾ 13

ರವರು ತೋರಿಸಿದ ಸ್ಥಳದಲ್ಲಿ ಚಾಸಾ 7 ಮತ್ತು 8 ರವರ ಸಮಕ್ಷಮ ಕೃತ್ಯ ಸ್ಥಳದ ಪಂಚನಾಮೆಯನ್ನು ಬೆಳಗ್ಗೆ 11.30 ರಿಂದ 12.30 ರ ಅವಧಿಯಲ್ಲಿ ಪಂಚನಾಮೆ ಜರುಗಿಸಿ ಕರಡು ನಕ್ಷೆ ಮತ್ತು ಭಾವಚಿತ್ರಗಳನ್ನು ತೆಗೆದಿರುತ್ತೇನೆ. ಹಾಗೂ ಮನೆ ಮುಂದೆ ಬಿದ್ದಿದ್ದ ಸ್ಕೂಟಿ ನಂಬರ್ ಪ್ಲೇಟ್, ಮಾಸ್ಕ್ ಪೀಸ್ ಹಾಗೂ ಒಂದು ಹೆಲ್ಮೆಟ್ ಅನ್ನು ಹಾಗೂ ಕೆಂಪು ಬಣ್ಣದ ಕಾರಿಗೆ ಸಂಬಂಧಪಟ್ಟ ಬಿಡಿ ಭಾಗಗಳನ್ನು ಮಹಜರ್ ಮೂಲಕ ಅಮಾನತು ಪಡಿಸಿಕೊಂಡಿರುತ್ತೇನೆ. ನಂತರ ಸದರಿ ವಸ್ತುವನ್ನು ಸ್ವತ್ತು ಪಟ್ಟಿಯಲ್ಲಿ ನಮೂದಿಸಿಕೊಂಡಿರುತ್ತೇನೆ. ಅದೇ ದಿನ ಠಾಣೆಗೆ ಬಂದು ಠಾಣಾ ಆವರಣದಲ್ಲಿ ನಿಂತಿದ ಕಾರ್ ಸಂಖ್ಯೆ: ಕೆ.ಎ.01-ಎಂ.ಎಫ್ 6352 ಹಾಗೂ ಸ್ಕೂಟರ್ ಸಂಖ್ಯೆ ಕೆ.ಎ. 18-ಇಜಿ 1018 ಅನ್ನು ಚಾಸಾ 7 ಮತ್ತು 8 ರವರ ಸಮಕ್ಷಮ ಚಾಸಾ 1 ರವರು ತೋರಿಸಿದ ಮೇರೆಗೆ ಅಮಾನತು ಮಹಜರ ಅನ್ನು ಮಾಡಿ ಭಾವಚಿತ್ರಗಳನ್ನು ತೆಗೆದಿರುತ್ತೇನೆ.

3. ಅದೇ ದಿನ ಚಾಸಾ 12 ಮತ್ತು 13 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ. ಪ್ರಕರಣದಲ್ಲಿ ತನಿಖಾ ಕಾಲಕ್ಕೆ ಪೋಟೊ ತೆಗೆದು ಸಿ.ಡಿ. ಮಾಡಿಕೊಟ್ಟ ಬಗ್ಗೆ ಹಾಗೂ ದೃಢಿಕರಣ ಪತ್ರ ನೀಡಿದ ಬಗ್ಗೆ ಚಾಸಾ 15 ರವರಿಂದ ವರದಿ ಪಡೆದುಕೊಂಡಿರುತ್ತೇನೆ. ಅದೇ ದಿನ ಸ್ಕೂಟರ್ ಮಾಲೀಕರಾದ ಅರುಣ ಕುಮಾರ್ ಇವರು ನಾನು ನೀಡಿದ ನೋಟಿಸ್ ಗೆ ಉತ್ತರ ಕೊಟ್ಟಿದ್ದು ಸದರಿ ಬೈಕ್ ಅನ್ನು ಆ ದಿನ ಮೃತ ಸಜೇಶ್ ಈತನು ಚಾಲನೆ ಮಾಡುತ್ತಿದ್ದ ಎಂದು, ಹಾಗೂ ವಿಮೆ ಮುಗಿದಿರುತ್ತದೆ ಎಂದು ಉತ್ತರ ಕೊಟ್ಟಿರುತ್ತಾರೆ. ದಿ: 31.12.2024 ರಂದು ಆರೋಪಿ 1 ರವರು ನಾವು ನೀಡಿದ ನೋಟಿಸ್ ಗೆ ಲಿಖಿತ ಉತ್ತರ ನೀಡಿದ್ದು, ಆತನು ಹಾಜರುಪಡಿಸಿದ ದಾಖಲೆಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೇ ದಿನ ಅಪಘಾತಕ್ಕೊಳಕಾದ ವಾಹನವನ್ನು ಪರೀಕ್ಷೆ ಮಾಡುವಂತೆ ಕೋರಿ ಚಾಸಾ 10 ರವರಿಗೆ ಮನವಿ ಪತ್ರ ಕಳುಹಿಸಿರುತ್ತೇನೆ. ದಿ: 05.01.2025 ರಂದು ಸರ್ಕಾರಿ ಆಸ್ಪತ್ರೆ ಎನ್ ಆರ್ ಪುರ ಇವರಿಂದ ಮೃತನ ಮರಣೋತ್ತರ ಪರೀಕ್ಷಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿ: 06.01.2025 ರಂದು ಕಾರ್ ಮಾಲೀಕರಿಗೆ ಸದರಿ ಕಾರನ್ನು Indemnity bond ಪಡೆದುಕೊಂಡು ಬಿಡುಗಡೆಗೊಳಿಸಿರುತ್ತೇನೆ. ದಿ: ದಿ: 09.02.2025 ರಂದು ಬೈಕ್ ಮಾಲೀಕರಿಗೆ ಸದರಿ ಬೈಕ್ ಅನ್ನು Indemnity bond ಪಡೆದುಕೊಂಡು ಬಿಡುಗಡೆಗೊಳಿಸಿರುತ್ತೇನೆ

4. ದಿಃ 21.01.2025 ರಂದು ಚಾಸಾ 9 ರವರಿಂದ ಚಾಸಾ 11 ರವರ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 22.02.2025 ರಂದು ಚಾಸಾ 10 ರವರಿಂದ ಅಪಘಾತಕ್ಕೊಳಕ್ಕಾದ ವಾಹನದಿಂದ ವಾಹನ ತಪಾಸಣಾ ವರದಿಯನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನನ್ನ ತನಿಖೆಯ ಕಾಲಕ್ಕೆ ಆರೋಪಿ 1 ರವರು ಠಾಣೆಗೆ ಹಾಜರಾಗಿದ್ದು, ಅವರಿಂದ ಬಾಂಡ್ ಪಡೆದುಕೊಂಡು ಬಿಡುಗಡೆಗೊಳಿಸಿ ಕಳುಹಿಸಿರುತ್ತೆನೆ. ನಂತರ ಆರೋಪಿತರ ವಿರುದ್ಧ ಸಾಕ್ಷಾಧಾರಗಳು ಲಭ್ಯವಾದ ಕಾರಣ ಧೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

5. ಸಾಕ್ಷಿಯು ದಿಃ 22.12.2024 ರಂದು ಅಪಘಾತ ಸ್ಥಳದ ಸ್ಥಳ ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2 (ಸಿ) ಎಂದು ಗುರುತಿಸಲಾಯಿತು. ನಿಪಿ 2 ಅನ್ನು ಮಾಡುವ ಕಾಲಕ್ಕೆ ತೆಗೆದ 4 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 3 ರಿಂದ 6 ಎಂದು ಗುರುತಿಸಲಾಗಿರುತ್ತದೆ. ಅದೇ ದಿನ ಠಾಣಾ ಆವರಣದಲ್ಲಿ ಮಾಡಿದ ಅಮಾನತು ಮಹಜರ್ ಅನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ 7 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 7(ಬಿ) ಎಂದು ಗುರುತಿಸಲಾಯಿತು. ನಿಪಿ 7 ಅನ್ನು ಮಾಡುವ ಕಾಲಕ್ಕೆ ತೆಗೆದ 5 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಈಗಾಗಲೇ ನಿಪಿ 8 ರಿಂದ ನಿಪಿ 12 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ದಿನಾಂಕಃ 19.12.2024 ರಂದು ಸರ್ಕಾರಿ ಆಸ್ಪತ್ರೆ ಎನ್ ಆರ್ ಪುರದಲ್ಲಿ ಮಾಡಿದ ಶವ ತನಿಖಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 15 ಎಂದು, ಸಾಕ್ಷಿಯ ಸಹಿಯನ್ನು ನಿಪಿ 15 (ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನಿಪಿ 15 ಅನ್ನು ಮಾಡುವ ಕಾಲಕ್ಕೆ ತೆಗೆದ 3 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ 16 ರಿಂದ ನಿಪಿ 18 ಎಂದು ಗುರುತಿಸಲಾಯಿತು. ದಿಃ 20.12.2024 ರಂದು ಆರೋಪಿ 1 ರವರಿಗೆ ನೀಡಿದ ಕಲಂ 133 ರಡಿ ನೋಟಿಸ್ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ನಿಪಿ 19 ಎಂದು, ಸಾಕ್ಷಿಯ ಸಹಿಯನ್ನು ನಿಪಿ 19(ಎ) ಎಂದು ಗುರುತಿಸಲಾಯಿತು. ದಿಃ 31.12.2024 ರಂದು ಆರೋಪಿ 1 ರವರು ನೀಡಿದ

ನೋಟಿಸ್ ಗೆ ಉತ್ತರದ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 20 ಎಂದು, ಸಾಕ್ಷಿಯ ಸಹಿಯನ್ನು ನಿಪಿ20(ಎ) ಎಂದು ಗುರುತಿಸಲಾಯಿತು. ದಿಃ 20.12.2024 ರಂದು 2 ನೇ ಆರೋಪಿಗೆ ಕಲಂ 133 ರಡಿ ನೋಟಿಸ್ ಪ್ರತಿಯನ್ನು ಹಾಜರುಪಡಿಸುತ್ತಿದ್ದು, ನಿಪಿ 21 ಎಂದು, ಸಾಕ್ಷಿಯ ಸಹಿಯನ್ನು ನಿಪಿ 21(ಎ) ಎಂದು ಗುರುತಿಸಲಾಯಿತು. ದಿಃ 22.12.2024 ರಂದು ಆರೋಪಿ 2 ರವರು ನೀಡಿದ ನೋಟಿಸ್ ಗೆ ಉತ್ತರದ ಪ್ರತಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 22 ಎಂದು, ಸಾಕ್ಷಿಯ ಸಹಿಯನ್ನು ನಿಪಿ 22(ಎ) ಎಂದು ಗುರುತಿಸಲಾಯಿತು. ಸದರಿ ಅಪಘಾತಕ್ಕೆ ಒಳಗಾದ 2 ವಾಹನಗಳನ್ನು Indemnity Bond ಮೇಲೆ ಬಿಡುಗಡೆ ಗೊಳಿಸಿದ್ದು ಸದರಿ ದಾಖಲೆಗಳನ್ನು ನಿಪಿ 23 ಮತ್ತು 24 ಎಂದು, ಸಾಕ್ಷಿಯ ಸಹಿಯನ್ನು ನಿಪಿ 23(ಎ) ಮತ್ತು 24(ಎ) ಎಂದು ಗುರುತಿಸಲಾಯಿತು. ದಿಃ 31.12.2024 ರಂದು RTO ಕಛೇರಿಗೆ ಸಲ್ಲಿಸಿದ ಅರ್ಜಿಯ ಪ್ರತಿ ಹಾಜರುಪಡಿಸುತ್ತಿದ್ದು, ನಿಪಿ 25 ಎಂದು, ಸಾಕ್ಷಿಯ ಸಹಿಯನ್ನು ನಿಪಿ 25(ಎ) ಎಂದು ಗುರುತಿಸಲಾಯಿತು. ದಿಃ 22.02.2025 ರಂದು ಸ್ವೀಕರಿಸಿದ ವಾಹನ ತಪಾಸಣಾ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ 26 ಎಂದು, ಸಾಕ್ಷಿಯ ಸಹಿಯನ್ನು 26(ಎ) ಎಂದು ಗುರುತಿಸಲಾಯಿತು. ದಿಃ 05.01.2025 ರಂದು ಮೃತ ಸಜೇಶ ಈತನ ಮರಣೋತ್ತರ ಪರೀಕ್ಷಾ ವರದಿಯನ್ನು ನೋಯಡಿ ಗುರುತಿಸಿದ್ದು, ಅದನ್ನು ನಿಪಿ 27 ಎಂದು ಸಾಕ್ಷಿಯ ಸಹಿಯನ್ನು ನಿಪಿ 27 (ಎ) ಎಂದು ಗುರುತಿಸಲಾಯಿತು. ದಿಃ 21.01.2025 ರಂದು ಚಾಸಾ 11 ರವರ ಗಾಯದ ದೃಢಿಕರಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ 28 ಎಂದು, ಸಾಕ್ಷಿಯ ಸಹಿಯನ್ನು 28(ಎ) ಎಂದು ಗುರುತಿಸಲಾಯಿತು. ಚಾಸಾ 15 ರವರಿಂದ ಪಡೆದುಕೊಂಡ ದೃಢಿಕರಣ ಪತ್ರ ನೋಡಿ ಗುರುತಿಸಿದ್ದು ಅದನ್ನು ನಿಪಿ 29 ಎಂದು, ಸಾಕ್ಷಿಯ ಸಹಿ ಯನ್ನು 29(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿ 1 ಹಾಗೂ ಮುದ್ದೆ ಮಾಲುಗಳನ್ನು ನೋಡಿ ಗುರುತಿಸಿರುತ್ತಾರೆ.

ಪಾಟೀ ಸವಾಲು፧ ಆರೋಪಿ ಪರ ಶ್ರೀ **NVS** ವಕೀಲರಿಂದ፧

1. ನಾನು ಚಾಸಾ 14 ರವರಿಂದ ಕಡತವನ್ನು ಸ್ವೀಕರಿಸುವ ಪೂರ್ವದಲ್ಲಿ ಘಟನಾ ಸ್ಥಳಕ್ಕೆ ಖುದ್ದಾಗಿ ಹೋಗಿರುವುದಿಲ್ಲ ಎಂದರೆ ಸರಿ. ಚಾಸಾ 1 ರವರು ನೀಡಿದ ದೂರಿನಲ್ಲಿ ಚಾಸಾ 13 ರವರು ಅಪಘಾತವನ್ನು ಕಣ್ಣಾರೆ ನೋಡಿರುತ್ತಾರೆ ಎಂದು ಹೇಳಿರುವುದಿಲ್ಲ ಎಂದರೆ ಸರಿ. ನಾನು ಪಂಚರ ಸಮಕ್ಷಮ ಶವಗಾರಕ್ಕೆ ಹೋಗಿ ಶವ ಪಂಚನಾಮೆ ಮಾಡಿರುತ್ತೇನೆ ಹಾಗೂ ಸಾಕ್ಷಿದಾರರ ಹೇಳಿಕೆಗಳನ್ನು ಮಾಡಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿ፧ 22.12.2024 ರಂದು ನಾನು ಘಟನಾ ಸ್ಥಳಕ್ಕೆ ಹೋದಾಗ ಅಪಘಾತಕ್ಕೊಳಗಾದ ವಾಹನಗಳು ಇರಲಿಲ್ಲ ಎಂದರೆ ಸರಿ. ಸದರಿ ವಾಹನಗಳನ್ನು ಎನ್ ಆರ್ ಪುರ ಪೋಲಿಸ್ ಠಾಣೆಗೆ ಯಾರು ತಂದಿರುತ್ತಾರೆ ಎಂದು ನನಗೆ ಹೇಳಲಾಗುವುದಿಲ್ಲ. ನನ್ನ ತನಿಖೆಯ ಕಾಲಕ್ಕೆ ಸದರಿ ವಾಹನಗಳನ್ನು ಯಾರು ಠಾಣೆಗೆ ತಂದು ನಿಲ್ಲಿಸಿರುತ್ತಾರೆ ಎಂಬ ಬಗ್ಗೆ ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿ. ಸದರಿ ವಾಹನಗಳನ್ನು ಠಾಣೆಗೆ ತರುವ ಪೂರ್ವದಲ್ಲಿ ಯಾವುದೇ ಮಹಜರ್ ಮತ್ತು ಭಾವಚಿತ್ರಗಳನ್ನು ತೆಗೆದಿರುವುದಿಲ್ಲ ಎಂದರೆ ಸರಿ. ಸದರಿಯವರು ಆ ದಿನ ರಸ್ತೆಯನ್ನು ಕ್ಲಿಯರ್ ಮಾಡುವ ಸಂಬಂಧ ವಾಹನ ತೆಗೆದುಕೊಂಡು ಬಂದಿರುತ್ತಾರೆ ಎಂಬ ಬಗ್ಗೆ ಯಾವುದೇ ಹೇಳಿಕೆ ಇರುವುದಿಲ್ಲ ಎಂದರೆ ಸರಿ. ನಾನು ಅಪಘಾತವನ್ನು ಖುದ್ದಾಗಿ ನೋಡಿರುವುದಿಲ್ಲ ಮತ್ತು ಅಪಘಾತವಾದ ನಂತರ ವಾಹನಗಳು ಎಲ್ಲೆಲ್ಲಿ ಬಿದ್ದಿದ್ದವು ಎಂಬುದನ್ನು ನಾನು ನೋಡಿರುವುದಿಲ್ಲ ಎಂದರೆ ಸರಿ. ನಾನು ಮಹಜರ್ ಅನ್ನು ಪಿರ್ಯಾದುದಾರರಿಗೆ ಸಹಾಯ ಮಾಡುವ ಸಲುವಾಗಿ ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ.

2. ನಾನು ಮಹಜರ್ ಮಾಡುವ ಕಾಲಕ್ಕೆ 112 ವಾಹನದ ಚಾಲಕರು ಯಾರು ಮತ್ತು ಘಟನೆಯ ಕುರಿತು ಘಟನೆಯ ಬಗ್ಗೆ ಕೇಳಿರುವುದಿಲ್ಲ ಮತ್ತು ಅವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸರಿ. ನಾನು ಪಿರ್ಯಾದುದಾರರಿಗೆ ಸಹಾಯ ಮಾಡುವ ಸಲುವಾಗಿ ನಕಾಶೆಯನ್ನು ತಯಾರಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ತನಿಖೆಯ ಕಾಲಕ್ಕೆ ಅಕ್ಕ-ಪಕ್ಕದ ಮನೆಯವರ ಹೇಳಿಕೆಯನ್ನು ಪಡೆದುಕೊಂಡಿಲ್ಲ ಎಂದರೆ ಸಾಕ್ಷಿ ಅವರದ್ದು ಒಂದೇ ಮನೆ ಇರುತ್ತದೆ

ಎಂದು ಉತ್ತರಿಸಿರುತ್ತಾರೆ. ಮಹಜರ್ ಸಾಕ್ಷಿದಾರರು ದೂರುದಾರರ ಸಂಬಂಧಿಕರು ಎಂದರೆ ಸರಿಯಲ್ಲ. ಕೃತ್ಯ ಸ್ಥಳದ ಸಾಕ್ಷಿದಾರರನ್ನು ನಾನು ಅಮಾನತ್ತು ಮಹಜರ್ ಗೆ ಸಾಕ್ಷಿದಾರರನ್ನಾಗಿ ಕರೆದುಕೊಂಡು ಹೋಗಿರುತ್ತೇನೆ ಎಂದರೆ ಸರಿ. ನಿಪಿ2 ಮತ್ತು 7 ಅನ್ನು ಮಾಡುವ ಕಾಲಕ್ಕೆ ಭಾವಚಿತ್ರಗಳನ್ನು ಚಾಸಾ 15 ರವರು ತೆಗೆದಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಿಪಿ 2 ಮತ್ತು 7 ಅನ್ನು ಮಾಡುವ ಕಾಲಕ್ಕೆ ಚಾಸಾ 15 ರವರು ಇದ್ದರು ಎಂಬ ಬಗ್ಗೆ ಅವುಗಳಲ್ಲಿ ನಮೂದು ಇಲ್ಲ ಎಂದರೆ ಸರಿ. ಸದರಿ ರಸ್ತೆಯಲ್ಲಿ ಅಪಘಾತದ ಬಗ್ಗೆ ಯಾವುದೇ ಕುರುಹುಗಳು ಇರಲಿಲ್ಲ ಎಂದರೆ ಸಾಕ್ಷಿ ಬಿಡಿ ಭಾಗಗಳು ರಸ್ತೆಯ ಪಕ್ಕದಲ್ಲಿ ಬಿದ್ದಿದ್ದವು ಎಂದು ಉತ್ತರಿಸಿರುತ್ತಾರೆ.

3. ನಿಪಿ 7 ರಲ್ಲಿ ವಾಹನಗಳನ್ನು ಯಾರು ಠಾಣೆಗೆ ಮತ್ತು ಯಾವ ದಿನಾಂಕದಂದು ತಂದು ನಿಲ್ಲಿಸಿರುತ್ತಾರೆ ಎಂಬ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ನಾನು ದಿನಾಂಕ: 22.12.2024 ರಂದು ಪಂಚರ ಸಮಕ್ಷಮ ಕೃತ್ಯ ಸ್ಥಳದ ಮಹಜರ್ ಅನ್ನು ಮಾಡಿ ಆ ವಸ್ತುಗಳನ್ನು ಅಮಾನತು ಪಡಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿಪಿ 2 ಮಹಜರ್ ಅನ್ನು ನಮ್ಮ ಅನುಕೂಲಕ್ಕೆ ತಕ್ಕಂತೆ ಠಾಣೆಯಲ್ಲಿಯೇ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಾನು ಪಂಚರ ಸಮಕ್ಷಮ ನಿಪಿ 7 ರಂತೆ ನಮ್ಮ ಪೋಲಿಸ್ ಠಾಣಾ ಆವರಣದಲ್ಲಿ ಅಮಾನತು ಮಹಜರ್ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಈ ಪ್ರಕರಣದಲ್ಲಿ ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಮಾಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಮಹಜರ್ ಮಾಡುವ ಕಾಲಕ್ಕೆ ನಾನು ಭಾವಚಿತ್ರಗಳನ್ನು ತೆಗೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಚಾಸಾ 15 ರವರಿಂದ ದೃಢಿಕರಣ ಪತ್ರ ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಾಹನ ತಪಾಸಣಾ ವರದಿ ಹಾಗೂ ಗಾಯದ ಪ್ರಮಾಣಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ 1 ರವರು ಕಾರನ್ನು ರಸ್ತೆಯ ಎಡಬದಿ ಕೊಪ್ಪದ ಕಡೆಯಿಂದ ಚಲಾಯಿಸಿಕೊಂಡು ಎನ್ ಆರ್ ಪುರ ಕಡೆಗೆ ಬರುತ್ತಿರುವಾಗ ಮೃತ ಸಜೇಶ ಈತನು ಮೊಬೈಲ್ ನಲ್ಲಿ ಮಾತನಾಡುತ್ತಾ ಸ್ಕೂಟಿಯನ್ನು ರಸ್ತೆಯ ಬಲಭಾಗಕ್ಕೆ ಒಂದೇ ಬಾರಿಗೆ ತಿರುಗಿಸಿದ ಕಾರಣ ಆತನ ತಪ್ಪಿನಿಂದ ಅಪಘಾತ

ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ 1 ರವರು ಸದರಿ ವಾಹನವನ್ನು ಅತೀ ವೇಗ, ಅಜಾಗರುಕತೆ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಬರುತ್ತಿರಲಿಲ್ಲ ಎಂದರೆ ಸರಿಯಲ್ಲ. ಮೃತ ಸಜೇಶ ಈತನು ವಿಮೆ ಇಲ್ಲದ ವಾಹನವನ್ನು ಚಲಾಯಿಸಿಕೊಂಡು ಅಪಘಾತ ಪಡಿಸಿಕೊಂಡಿದ್ದು ಆತನ ಕುಟುಂಬಕ್ಕೆ ಸಹಾಯ ಮಾಡಲು ನಾನು ಆರೋಪಿ 1 ರವರ ವಿರುದ್ಧ ಸುಳ್ಳು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರುಃ ನ.ರಾ.ಪುರ.

ಸಾಕ್ಷಿದಾರರ ಸಹಿಃ